**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು**

**ಸಿ ಸಿ ನಂಃ258/2017**

**ಚಾಸಾ-27/ಪ್ರಾಸಾ-9**

**ಮಾನ್ಯ ಉಚ್ಚ ನ್ಯಾಯಾಲಯ ವಿಸಿ ನಿಯಮಾವಳಿ 2020 ರ ಅಡಿಯಲ್ಲಿ ಸಾಕ್ಷಿಯನ್ನು ವಿಸಿಯ ಮೂಲಕ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ದಿನಾಂಕಃ06.06.2026**

ಹೆಸರು : ಶಂಷುದ್ದೀನ್ ಕೆ.ಬಿ ತಂದೆ ಎಂ. ಬಾಹುದ್ದೀನ್

ವಯಸ್ಸು : **53** ವರ್ಷ

ಉದ್ಯೋಗ : ಎ.ಎಸ್.ಐ. ಅಜಾದ್ ನಗರ ಪೋಲಿಸ್ ಠಾಣೆ, ದಾವಣಗೆರೆ

ವಿಳಾಸ : ದಾವಣಗೆರೆ.

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ನಾನು ದಿಃ**14.06.2015** ರಿಂದ ದಿಃ**22.08.2021** ರ ವರೆಗೂ , ಜಗಳೂರು ಠಾಣೆಯಲ್ಲಿ ಮುಖ್ಯಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ**30.06.2016** ರಂದು , ಚಾಸಾ-**1** ರವರರಿಂದ ಲಿಖಿತ ದೂರನ್ನು ಪಡೆದುಕೊಂಡು . ನಾನು ಸದರಿ ಪಿರ್ಯಾದಿ ಅದಾರದ ಮೇರೆಗೆ ನಮ್ಮ ಠಾಣಾ ಗುನ್ನಾ ನಂಃ**122/2016** ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ ದೂರನ್ನು ನಿ.ಪಿ.**19** ಎಂದು ಗುರುತಿಸಲಾಗಿರುತ್ತದೆ, ಸಾಕ್ಷಿಯ ಸಹಿಯನ್ನು ನಿ.ಪಿ.**19**(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿ ನೋಡಿ ಗುರುತಿಸಿದ ಪ್ರಥಮ ವರ್ತಮಾನ ವರದಿಯನ್ನು ನಿ.ಪಿ.**20** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.**20**(ಎ) ಎಂದು ಗುರುತಿಸಲಾಯಿತು. ನಂತರ ಅದೇ ದಿನಮುಂದಿನ ತನಿಖೆಗೆ ಚಾಸಾ- **28** ರವರಿಗೆ ಕಡತವನ್ನು ವರ್ಗಾಯಿಸಿರುತ್ತೇನೆ .

**<u>ಪಾಟೀ ಸವಾಲುಃ-ಆರೋಪಿಗಳ  ಪರ H.N ವಕೀಲರಿಂದಃ</u>**

ಚಾಸಾ-1 ರವರು ನಿಪಿ.19 ರಲ್ಲಿರುವಂತೆ ಯಾವುದೇ ದೂರನ್ನು ನೀಡಿರುವುದಿಲ್ಲ ಪ್ರಕರಣಕ್ಕೆ ಅನುಕೂಲವಾಗಲಿ  ಎಂದು ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಪರಿಹಾರ ಸಿಗಲಿ ಎಂದು ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ .  ಆರೋಪಿಗಳು ಯಾವುದೇ ತಪ್ಪು ಮಾಡದೇ ಇದ್ದರು ಸಹ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ.)

ಓ ಹೇ  ಕೇ ಸರಿ ಇದೆ

**Sd/-**

ಪ್ರ.ದ.ನ್ಯಾ.ದಂ., ಜಗಳೂರು